ಸಾಕ್ಷಿಯನ್ನು ದಿಃ 18-07-2022 ರಂದು ಪುನ್ಹ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ  ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

5 . ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ಈ ಹಿಂದದೆ ಎಲ್ಲೂ ನೋಡಿರುವುದಿಲ್ಲ. ಆ ದಿನ ನನ್ನ ಬಳಿ ಬ್ಯಾಗ್ ಕಿತ್ತುಕೊಂಡು ಹೋದ ವ್ಯಕ್ತಿ ನ್ಯಾಯಾಲಯದ ಮುಂದೆ ಇಲ್ಲ.  ಆ ದಿನ ಬಂದ ವ್ಯಕ್ತಿಗಳ ಸ್ಕೂಟರ್ ಗಳನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ಎರಡು ಛಾಯಾಚಿತ್ರ ಗಳನ್ನು ತೋರಿಸಲಾಗಿ , ಅದನ್ನು ನನಗೆ ಗುರುತಿಸಲು ಸಾಧ್ಯವಿಲ್ಲವೆಂದು ನುಡಿದಿರುತ್ತಾರೆ.

6. ಈಗ ಎರಡು ಛಾಯಚಿತ್ರದಲ್ಲಿ  ಇರುವ ಚೂರಿಯನ್ನು ನಾನು ನೋಡಿರುವುದಿಲ್ಲ . ಸಾಕ್ಷಿ ಮುಂದುವರಿದು ಛಾಯಾಚಿತ್ರದಲ್ಲಿ ಇರುವ ಬ್ಯಾಗ್ ನನ್ನದು ಎಂದು ನುಡಿದಿರುತ್ತಾರೆ . ಸದರಿ ಎರಡು ಛಾಯಚಿತ್ರ ಗಳನ್ನು ನೋಡಿ ಗುರುತಿಸಿದ ಮೇರೆಗೆ , ಅವುಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು.

7. ಈ ಪ್ರಕರಣದ ಕುರಿತು ನಾನು ಠಾಣೆಗೆ ಹೋಗಿರುತ್ತೇನೆ , ಆರೋಪಿತರನ್ನು ತೋರಿಸಿರುತ್ತಾರೆ. ಆದರೆ ಈ ದಿನ ಅವರನ್ನು ಗುರುತಿಸಲು ಸಾಧ್ಯವಿಲ್ಲ. ಠಾಣೆಯಲ್ಲಿ ಆರೋಪಿತರ ಹೆಸರುಗಳು ಗೊತ್ತಾಗಿರುವುದಿಲ್ಲ. ಬ್ಯಾಗಿನಲ್ಲಿ ಇದ್ದ ಮೊಬೈಲ್ ನನಗೆ ಸಿಕ್ಕಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

<u>ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ</u>

1. ದಿಃ 27-08-2019 ರಂದು ನಾನು ಠಾಣೆಗೆ ಹೋದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಆತನ ಹೆಸರು ನವೀನ್ ಗೌಡ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಛಾಯಚಿತ್ರದಲ್ಲಿ ಇರುವ ಮೊಟಾರು ಸೈ ಕಲ್ ನಲ್ಲಿ ಇರುವ ಕೆಎ-19 ಇ ಜೆಡ್ 9828 ನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ . ನಿಪಿ-3 ಮತ್ತು ನಿಪಿ-4 ರಲ್ಲಿ ಕಾಣುವಂತಹ ಚೂರಿಯನ್ನು ಆರೋಪಿಯು ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ನ್ಯಾಯಾಲಯದ ಮುಂದೆ ಇರುವ ಆರೋಪಿ ನವೀನ್ ಗೌಡ ನನ್ನ ಮೊಬೈಲ್ ನ್ನು ಪೊದೆಗೆ ಎಸೆದಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್.ಟಿ ರವರಿಂದಃ</u>

1. ನಾನು 2017 ರಲ್ಲಿ ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ನೀಡುವಾಗ ನನ್ನ ಕಪ್ಪು ಬಣ್ಣದ ಬ್ಯಾಗ್ ಹಾಗೂ ಅದರಲ್ಲಿ ಇದ್ದ ಮೊಬೈಲ್ ನಂಬರನ್ನೂ ಸಹ ನಮೂದಿಸಿ ನೀಡಿರುತ್ತೇನೆ. ನಾನು ದೂರನ್ನು ಲಿಖಿತವಾಗಿ ನೀಡಿರುತ್ತೇನೆ.



2. ನಾನು ಕಾಲೇಜಿಗೆ ಹೋಗುವಾಗ ಪುಸ್ತಕಗಳು ಬ್ಯಾಗಿನಲ್ಲಿ ಇದ್ದವು ಎನ್ನುವ ವಿಚಾರವನ್ನು ಪೊಲೀಸರಿಗೆ ತಿಳಿಸಿರುತ್ತೇನೆ. ಪುಸ್ತಕಗಳು ಎಂ.ಓ-1 ಬ್ಯಾಗಿನಲ್ಲಿ ಇತ್ತು. ಸದರಿ ಪುಸ್ತಕವನ್ನು ನಾನು 2019 ರಲ್ಲಿ ಠಾಣೆಗೆ ಹೋಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಂ.ಓ-1 ನನ್ನದೇ ಎಂದು ತೋರಿಸಲು ಅದರಲ್ಲಿ ವಿಶೇಷವಾಗಿ ಯಾವುದೇ ಗುರುತು ಇಲ್ಲ . ಅದರ ಬಣ್ಣವನ್ನು ನೋಡಿ ಅದು ನನ್ನದೇ ಎಂದು ಹೇಳುತ್ತೇನೆ. ಎಂ.ಓ-1 ನನ್ನದು ಅಲ್ಲ ಎಂದರೆ ಅದರ ಬಣ್ಣವನ್ನು ನೋಡಿ ನನ್ನದೆಂದು ಹೇಳುತ್ತೇನೆ. ಆರೋಪಿಗೂ ಹಾಗೂ ಎಂ.ಓ-1 ಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಚಾಸಾ-2 ನನ್ನ ಭಾವ , ಚಾಸಾ-3 ರಿಂದ ಚಾಸಾ-5 ನನ್ನ ಪಕ್ಕದ ಮನೆಯವರು. ಚಾಸಾ-6 ನನ್ನ ತಂದೆ , ಚಾಸಾ-7 ನನ್ನ ತಾಯಿ , ಚಾಸಾ-8 ನನ್ನ ಅಣ್ಣ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ